


'ಪರಿಸರ' ಎನ್ನುವ ಪದ ಎಲ್ಲರಿಗೂ ತಿಳಿದಿದೆ. ಪರಿಸರ ಪ್ರಜ್ಞೆ, ಪರಿಸರದ ಸ್ವಚ್ಛತೆ ಎಂದೆಲ್ಲ ಜನರು ಹೇಳುವಾಗ ಎಲ್ಲರಿಗೂ ಪರಿಸರ ಎಂದರೆ ನಮ್ಮ ಸುತ್ತಲಿನ ಜಾಗ, ನಾವಿರುವ ಪ್ರಪಂಚ ಎಂದು ಅರ್ಥವಾಗುತ್ತದೆ. ನಾವು ಮತ್ತು ನಮ್ಮ ಸುತ್ತಲಿನ ಸಜೀವ ಮತ್ತು ನಿರ್ಜೀವ ವಸ್ತುಗಳೆಲ್ಲವನ್ನೂ ಪರಿಗಣಿಸಿದರೆ ಅದು 'ಪರಿಸರ ವ್ಯವಸ್ಥೆ' (**Ecosystem**) ಎಂದಾಗುತ್ತದೆ. ಆದರೆ, ನಮ್ಮನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ, ನಮ್ಮೊಳಗೂ ಒಂದು ಪ್ರಪಂಚವಿದೆ. ಅದರಲ್ಲಿ ಕೂಡ ಪರಿಸರವಿದೆ. ಅದನ್ನು ನಾವು 'ಮಾನವನ ದೈಹಿಕ ಪರಿಸರ' (**Human Ecology**) ಎಂದು ಕರೆಯುತ್ತೇವೆ.

## ನಾವು ಬೇರೆ ಮತ್ತು ನಮ್ಮೊಳಗು ಬೇರೆ ಆಗಲು ಹೇಗೆ ಸಾಧ್ಯ?

ನಾವು ಪರಿಸರದ ಭಾಗ ಹೇಗೋ, ಹಾಗೆಯೇ ನಮ್ಮ ದೇಹದೊಳಗಿನ ಪರಿಸರ, ಅದರೊಳಗಿನ ಜೈವಿಕ ಜೀವಜಾಲ, ವಾತಾವರಣ ಎಲ್ಲವನ್ನೂ ಸೇರಿಸಿ 'ಮಾನವ ದೇಹದ ಪರಿಸರ' ಎಂದು ಅರ್ಥೈಸುತ್ತೇವೆ. ಪ್ರತಿಯೊಬ್ಬರೂ ತಮ್ಮನ್ನು ತಾವು ಕೇವಲ 'ಒಬ್ಬ ಜೀವಂತ ವ್ಯಕ್ತಿ' ಎಂದು ತಿಳಿದಿರುತ್ತಾರೆ. ಆದರೆ ನಾವು 'ನಮ್ಮದು' ಎಂದುಕೊಂಡಿರುವ ಈ ನಮ್ಮ ದೇಹದಲ್ಲಿ ನಾವಲ್ಲದ ಟ್ರಿಲಿಯನ್‌ಗಟ್ಟಲೆ ಸೂಕ್ಷ್ಮಾಣು ಜೀವಿಗಳಿವೆ. ನಮ್ಮ ದೇಹ ಅವುಗಳದ್ದು ಕೂಡ. ನಮಗೆ ಅವುಗಳು ಅಪರಿಚಿತವಾದರೂ ನಮ್ಮ ದೇಹವೇ ಅವುಗಳ ವಾಸ ಸ್ಥಾನ, ಪ್ರಪಂಚ ಮತ್ತು ಪರಿಸರ. ಇವು ನಮ್ಮ ದೇಹದ ಅವಿಭಾಜ್ಯ ಅಂಗಗಳಂತೆ ಕೆಲಸ ಮಾಡುತ್ತವೆ. ನಮ್ಮ ದೈಹಿಕ ಪರಿಸರಕ್ಕೆ ಕಾರಣವಾಗುತ್ತವೆ.

ನಮ್ಮ ದೇಹದೊಳಗಿನ ಪರಿಸರದಲ್ಲಿ ಏರುಪೇರಾಗದ ಹೊರತು ನಾವು ಆ ಬಗ್ಗೆ ಅಷ್ಟಾಗಿ ಯೋಚಿಸುವುದಿಲ್ಲ. ಈ ನಮ್ಮೊಳಗಿನ ಪರಿಸರ ಸದಾ ಬದಲಾಗುತ್ತಿರುತ್ತದೆ. ನಮ್ಮ ಸುತ್ತಲಿನ ಪರಿಸರಕ್ಕೂ ಮತ್ತು ನಮ್ಮ ದೇಹದೊಳಗಿನ ವೈಯಕ್ತಿಕ ಪರಿಸರಕ್ಕೂ ನಿಕಟ ಸಂಬಂಧವಿದೆ. ಇವೆರಡೂ ಒಂದಕ್ಕೊಂದು ಹೆಣೆದುಕೊಂಡಿವೆ. ಈ ಕಾರಣಕ್ಕೆ ನಮ್ಮ ದೇಹದ ಪರಿಸರ, ಅಲ್ಲಿರುವ ಜೀವಿಗಳ ಬಗ್ಗೆ ತಿಳಿಯುವುದು ಅತ್ಯಂತ ಅವಶ್ಯಕ.

ನಮ್ಮ ದೇಹದಲ್ಲಿ ನಾನಾ ಬಗೆಯ ಜೀವಿಗಳು ವಾಸಿಸುತ್ತವೆ. ಇದು ಅತ್ಯಂತ ಸಹಜ ಮತ್ತು ಸಾಧಾರಣ. ಇವುಗಳ ಸಂಖ್ಯೆ ಎಷ್ಟು ಗೊತ್ತೇ?

ನಮ್ಮ ದೇಹದ ಪ್ರತಿ ಜೀವಕಣಕ್ಕೆ ಈ ಮೈಕ್ರೊಜೀವಿಗಳ ಅನುಪಾತ 1:10. ಅಂದರೆ, ಒಂದು ಜೀವಕಣಕ್ಕೆ ಹತ್ತು ಸೂಕ್ಷ್ಮ ಜೀವಿಗಳಿವೆ. ಇದರ ಜೊತೆಗೆ, ಪ್ರತಿ ಜೀವಕಣ ಮತ್ತು ಸೂಕ್ಷ್ಮಾಣು ಜೀವಿಗಳ ದೇಹದಲ್ಲಿರುವ ವೈರಸ್‌ಗಳನ್ನು ಎಣಿಸಿದರೆ, ನಮ್ಮ ಮೆದುಳು ಅರೆಕ್ಷಣ ನಂಬಲಾಗದ ಅಗಾಧ ಸಂಖ್ಯೆಯೊಂದು ನಮಗೆದುರಾಗುತ್ತದೆ. ನಮ್ಮ ಚರ್ಮದ ಮೇಲಿರುವ ಸೂಕ್ಷ್ಮ ಜೀವಿಗಳನ್ನು ಮಾತ್ರ ಎಣಿಸಿದರೆ ಸಾಕು, ಅವುಗಳ ಸಂಖ್ಯೆ ಪ್ರಪಂಚದ ಜನಸಂಖ್ಯೆಯನ್ನೂ ಮೀರುತ್ತದೆ. ನಮ್ಮ ಕರುಳಿನಲ್ಲಿರುವ ಸೂಕ್ಷ್ಮಾಣುಗಳ ಸಂಖ್ಯೆ ಪ್ರಪಂಚದ ಜನರಿಗಿಂತ ಸಾವಿರ ಪಟ್ಟು ಹೆಚ್ಚು. ಇದು ಖಂಡಿತ ನಿಜ. ನಮ್ಮ ದೇಹದ ಬೇರೆ ಬೇರೆ ಭಾಗಗಳಲ್ಲಿ ಅತ್ಯಂತ ವೈವಿಧ್ಯಮಯವಾದ ಮತ್ತು ಭಿನ್ನವಾಗಿ ಕ್ರಿಯಾಶೀಲವಾಗಿರುವ ಸೂಕ್ಷ್ಮ ಜೀವಿಗಳು ಮನೆಮಾಡಿಕೊಂಡಿವೆ. ಇಡೀ ಮಾನವ ದೇಹದ ಯಾವುದೇ ಅಂಗಾಂಶಗಳು ಈ ಸೂಕ್ಷ್ಮ ಜೀವಿಗಳಿಂದ ಮುಕ್ತವಲ್ಲ.

ನಮ್ಮ ಮೇಲೆ ಮತ್ತು ನಮ್ಮೊಳಗಿರುವ ಜೀವಿಗಳು ನಮ್ಮ ಜೈವಿಕ ಪರಿಸರದ ಅವಿಭಾಜ್ಯ ಅಂಗಗಳು. ಪ್ರತಿಯೊಬ್ಬ ಮನುಷ್ಯನ ಜೈವಿಕ ಪರಿಸರ ಅತ್ಯಂತ ಭಿನ್ನ. ಒಬ್ಬರಂತೆ ಇನ್ನೊಬ್ಬರದ್ದು ಇರುವುದಿಲ್ಲ.

ಪ್ರಪಂಚದಲ್ಲಿ ನಾವು ಹುಟ್ಟುವ ಮುಂಚೆಯೇ ಸೂಕ್ಷ್ಮಜೀವಿಗಳು ಈ ಭೂಮಿಯ ಮೇಲೆ ಇದ್ದಂಥವು. ಸುಮಾರು 3.5 ಬಿಲಿಯನ್ ವರ್ಷಗಳಿಂದಲೂ ಅವುಗಳು ಅಸ್ತಿತ್ವದಲ್ಲಿವೆ ಎಂಬ ಅಂದಾಜಿದೆ. ಈ ವಿಶ್ವವ್ಯಾಪಿ ಸೂಕ್ಷ್ಮ ಜೀವಿಗಳಿಗೆ ಮನುಷ್ಯನ ದೇಹವನ್ನೂ ವ್ಯಾಪಿಸಿಕೊಂಡು ಬದುಕಲು ಕಲಿಯಲು ಜಾಸ್ತಿ ಸಮಯವೇನೂ ಬೇಕಾಗಲಿಲ್ಲ.

ಹಲವು ವರ್ಷಗಳ ಹಿಂದೆ, ನಮ್ಮ ದೇಹದ ಕೆಲವೇ ಕೆಲವೆಡೆ ಈ ಬ್ಯಾಕ್ಟೀರಿಯಾಗಳಿವೆ ಎಂದು ನಂಬಿದ್ದೆವು. ಇದೀಗ ಅಂಡಧಾರಕದಲ್ಲಿ